# ವಿಜಯದಾಸರ ಜೀವನ ಮತ್ತು ಸಂದೇಶ

ಡಾ. ಕೆ. ಗೋಕುಲನಾಥ

**ಭಾ**ರತವು 'ಬಹುಧರ್ಮಗಳಿಗೆ ಆಡುಂಬೊಲ'ವಾಗಿದೆ. ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಶತಮಾನದಲ್ಲಿಯೂ, ಪ್ರತಿಯೊಂದು ಭಾಷಾ ಪ್ರಾಂತ್ಯದಲ್ಲಿಯೂ ಹಲವಾರು ಮಹಾತ್ಮರು ಆಧ್ಯಾತ್ಮಿಕ ವಿಚಾರದಲ್ಲಿ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡು, ಜ್ಞಾನಭಕ್ತಿಗಳನ್ನು ಸಂಪಾದಿಸಿ, ವೈರಾಗ್ಯಪೂರ್ಣ ಜೀವನವನ್ನು ನಡೆಸಿ ಅನುಭಾವಿಕ ಅಂಶಗಳಿಂದ ತುಂಬಿದ ಭಕ್ತಿ ಸಾಹಿತ್ಯವನ್ನು ರಚಿಸುವುದರ ಮೂಲಕ ಜ್ಞಾನದ ನಂದಾದೀಪವನ್ನು ಬೆಳಗಿಸುತ್ತಿದ್ದಾರೆ. ಇಂತಹವರನ್ನೇ ನಾವು ಭಕ್ತರು–ಶರಣರು–ದಾಸರು–ಸಂತರು ಎಂದು ಗುರುತಿಸುತ್ತಿದ್ದೇವೆ. ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಕ್ರಿ.ಶ. ೬–೭ ನೇ ಶತಮಾನದಲ್ಲಿ ಆಳ್ವಾರರು 'ಪ್ರಬಂಧ ಪಾಶುರ' ಗಳನ್ನು, ಕರ್ನಾಟಕದಲ್ಲಿ ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ವಚನಸಾಹಿತ್ಯವನ್ನು, ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ಹರಿದಾಸರು ಕೀರ್ತನೆಗಳನ್ನು ರಚಿಸುವ ಮೂಲಕ ಭಕ್ತಿ ಸಾಹಿತ್ಯವು ಉಗಮವಾಗಿ ಕಾಲಕಾಲಕ್ಕೆ ವಿಕಾಸವಾಯಿತು. ನರಹರಿ ತೀರ್ಥರಿಂದ ಅಂಕುರಗೊಂಡ ಕನ್ನಡದ ಹರಿದಾಸ ಸಾಹಿತ್ಯ, ಶ್ರೀಪಾದರಾಜರಿಂದ ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ವ್ಯವಸ್ಥಿತ ಪಂಥವಾಗಿ ಮುಂದುವರಿಯಿತು. ಪುರಂದರದಾಸರು, ಕನಕದಾಸರಿಂದ ಉನ್ನತ ಶಿಖರವನ್ನು ಮುಟ್ಟಿದ ದಾಸ ಸಾಹಿತ್ಯ ಪರಂಪರೆ ಸುಮಾರು ಒಂದು ಶತಮಾನದವರೆಗೆ ತಟಸ್ಥಗೊಂಡಿದ್ದುದನ್ನು ಪುನಃ ಉತ್ಥಾನಗೊಳಿಸಿದವರೇ ವಿಜಯದಾಸರು.

ಕ್ರಿ.ಶ. ೧೬೮೭ ರಲ್ಲಿ ಕರ್ನಾಟಕದ ರಾಯಚೂರಿನ ಬಳಿ ಇರುವ ಮಾನವಿ ತಾಲ್ಲೂಕಿನ ಚೀಕಲಪರಿವಿ ಎಂಬ ಹಳ್ಳಿಯಲ್ಲಿದ್ದ ಮಾಧ್ವ ಬ್ರಾಹ್ಮಣ ದಂಪತಿಗಳಾದ ಶ್ರೀನಿವಾಸಪ್ಪ–ಕೂಸಮ್ಮ ಅವರ ಮಗನಾಗಿ ಹುಟ್ಟಿದ ದಾಸಪ್ಪ, ಹದಿನಾರನೆಯ ವಯಸ್ಸಿನಲ್ಲಿ ಬಡತನದ ನಿಮಿತ್ತ ಮನೆಯನ್ನು ಬಿಟ್ಟು ಹೋಗುವಂತಾಯಿತು. ನಾಲ್ಕು ವರ್ಷ ಭಕ್ತರ ಗುಂಪಿನೊಡನೆ ಭಾರತ ಯಾತ್ರೆ ಮಾಡಿ ಮನೆಗೆ ಹಿಂದಿರುಗಿದ ದಾಸಪ್ಪನಿಗೆ ಅರಳಮ್ಮ ಎಂಬ ಸಾಧ್ವಿಯೊಡನೆ ವಿವಾಹವಾಯಿತು. ಹನ್ನೆರಡು ವರ್ಷ ಸಂಸಾರವನ್ನು ಮಾಡಿದ ದಾಸಪ್ಪನು ಕಷ್ಟಕಾರ್ಪಣ್ಯಗಳನ್ನು ತಡೆಯಲಾರದೆ ವಾರಾಣಸಿಗೆ ಹೋಗುವಂತಾಯಿತು. ಅಲ್ಲಿರುವಾಗ ಪುರಂದರದಾಸರು ಕನಸಿನಲ್ಲಿ ದಾಸಪ್ಪನಿಗೆ ಕಾಣಿಸಿಕೊಂಡು ವ್ಯಾಸಕಾಶಿಗೆ ಕರೆದೊಯ್ದು ತತ್ವಜ್ಞಾನವನ್ನು ಬೋಧಿಸಿ, ತಂಬೂರಿಯನ್ನು ಕೊಟ್ಟು ದಾಸಪ್ಪನ ನಾಲಗೆಯ ಮೇಲೆ 'ವಿಜಯವಿಠಲ' ಎಂದು ಬರೆದಂತೆ ಭಾಸವಾಯಿತು.

ಮಾನ್ಯ ಲೇಖಕರು ಬೆಂಗಳೂರಿನ ಎ.ಪಿ.ಎಸ್. ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು; ದಾಸಸಾಹಿತ್ಯದಲ್ಲಿ ಪರಿಣತರು.



ಬಾಲ್ಯದಿಂದಲೂ ರೂಢಿಸಿಕೊಂಡಿದ್ದ ಹರಿಭಕ್ತಿ, ಅನುಭವಿಸಿದ ಕಷ್ಟಕೋಟಲೆಗಳು, ಪುರಂದರದಾಸರ ಉಪದೇಶದ ಮಹಾತ್ಮೆ –ಎಲ್ಲವೂ ಒಟ್ಟಾಗಿ ಕೆಲಸ ಮಾಡಿದ ನಿಮಿತ್ತ, ಕಾಲವೂ ಪಕ್ವವಾಗಿದ್ದುದರಿಂದ, ಎಚ್ಚರಗೊಂಡ ತಕ್ಷಣ, ಕನಸಿನ ದೃಶ್ಯದ ನೆನಪಿನಿಂದ ರೋಮಾಂಚನಗೊಳ್ಳುವಂತಾಯಿತು ದಾಸಪ್ಪನಿಗೆ. ಅದಲ್ಲದೆ, **"ಅಂತರಂಗದ ಕದವು ತೆರೆಯಿತಿಂದು ಎಂತು ಜನುಮದ ಪ್ರಾಪ್ತಿಯಾಯಿತೊ ಎನಗೆ"** ಎಂದು ಧನ್ಯತೆಯ ಕೀರ್ತನಕುಸುಮವನ್ನು ವಿಜಯವಿಠ್ಠಲನ ಅಡಿದಾವರೆಗಳಲ್ಲಿ ಅರ್ಪಿಸುವಂತಾಯಿತು. **"ದಾಸ ಪುರಂದರನ ಪಾದವನು ಪೊಂದಿದೆನೊ/ಏಸು ಜನ್ಮದ ಪುಣ್ಯರಾಶಿ ಫಲಿಸಿತೊ ಎನಗೆ"** ಎಂಬ ಧನ್ಯತೆಯನ್ನು ಹೊಂದಿದರೂ, ಆಧ್ಯಾತ್ಮಿಕ ಸಾಧನೆಗೆ ಪುರಂದರದಾಸರೇ ಅಂತರಂಗದಲ್ಲಿ ಪ್ರೇರಕರಾಗಿ ನಿಂತು ಮಾರ್ಗದರ್ಶನ ಮಾಡಬೇಕೆಂದು, **"ಗುರು ಪುರಂದರದಾಸರೇ ನಿಮ್ಮ ಚರಣ ಸರಸಿಜ ನಂಬಿದೇ ಗುರುವರಹಿತನ ಮಾಡಿ ಎನ್ನನು ಪೊರೆವ ಭಾರವು ನಿಮ್ಮದೆ"** ಎಂದು ಪುರಂದರದಾಸರನ್ನು ಬೇಡಿಕೊಂಡರು.

ದಾಸಪ್ಪನಿಗೆ 'ವಿಜಯವಿಠಲ' ಎಂಬ ಅಂಕಿತ ಪ್ರಾಪ್ತಿಯಾದ ಮೇಲೆ ಅವನ ಜೀವನಚರ್ಯೆಯೇ ಬದಲಾಯಿತು. ವಿಧವೆಯಾದ ತಾಯಿ, ಕೈ ಹಿಡಿದಿದ್ದ ಹೆಂಡತಿ, ನಂಬಿದ ಇಬ್ಬರು ಕಿರಿಯ

ಸೋದರರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಸ್ವೀಕರಿಸಲು ನೇರವಾಗಿ ಚೀಕಲಪರಿವಿಗೆ ಬಂದು ನೆಲೆಸಿ, ಹರಿದಾಸ ಜೀವನವನ್ನು ನಡೆಸುವುದರ ಮೂಲಕ 'ವಿಜಯದಾಸರು' ಎಂದು ಖ್ಯಾತರಾದರು. ಪ್ರತಿನಿತ್ಯವೂ ಮಧ್ವ ಸಿದ್ಧಾಂತದ ಅಧ್ಯಯನ, ಹರಿದಾಸರ ಕೀರ್ತನೆಗಳ ಚರ್ಚೆ, ಸಕಲ ದೇವತೆಗಳ ಸ್ತೋತ್ರ–ಭಜನೆ ಹಾಗೂ ಕೀರ್ತನೆ–ಸುಳಾದಿ–ಉಗಾಭೋಗಗಳ ರಚನೆ, ಆಧ್ಯಾತ್ಮಿಕ ವಿಚಾರಗಳನ್ನು ತಿಳಿಯಬಯಸಿದವರಿಗೆ ಉಪದೇಶ – ಈ ಬಗೆಯ ದಿನನಿತ್ಯದ ಆಧ್ಯಾತ್ಮಿಕ ದಿನಚರಿಯನ್ನು ವಿಜಯದಾಸರು ಹಮ್ಮಿಕೊಂಡರು. ಪ್ರತಿ ವರ್ಷವೂ ಬ್ರಹ್ಮೋತ್ಸವಕ್ಕೆ ತಿರುಪತಿಗೆ ಹೋಗುವುದು, ಆಷಾಢ ಏಕಾದಶಿಯಂದು ಪಂಢರಪುರಕ್ಕೆ ಯಾತ್ರೆ ಮಾಡುವುದು ಮತ್ತು ಎರಡು ವರ್ಷಗಳಿಗೆ ಒಮ್ಮೆ ನಡೆಯುವ ಪರ್ಯಾಯಕ್ಕೆ ಉಡುಪಿಗೆ ತೆರಳುವುದು, ಪುರಂದರದಾಸರ ಆರಾಧನೆಯನ್ನು ಹಂಪೆಯಲ್ಲಿ ವಿಜೃಂಭಣೆಯಿಂದ ಆಚರಿಸುವುದು – ಇವು ವಿಜಯದಾಸರ ವಾರ್ಷಿಕ ಕಾರ್ಯಕ್ರಮಗಳಾದವು.

ಒಮ್ಮೆ ಹಂಪೆಯಲ್ಲಿ ಪುರಂದರದಾಸರ ಆರಾಧನೆಯನ್ನು ಮಾಡುತ್ತಿರುವಾಗ ವಿಧವೆಯೂ, ಅನಾಥಳೂ ಆದ ತಾಯಿಯೊಬ್ಬಳು ಬಡತನದ ಹಿಂಸೆ, ಬಂಧುಗಳ ಕಾಟವನ್ನು ತಡೆಯಲಾರದೆ ರೋಗರುಜಿನಗಳಿಂದ ಬಳಲುತ್ತಿದ್ದ ಮಗುವಿನೊಡನೆ ತುಂಗಭದ್ರೆಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದಾಗ, ಆಕೆಯ ಕಷ್ಟಕಾರ್ಪಣ್ಯಗಳನ್ನು ತಿಳಿದು ಅಭಯವಿತ್ತು ತಮ್ಮ ಮನೆಯಲ್ಲಿ ಆ ತಾಯಿ–ಮಗುವಿಗೆ ಆಶ್ರಯವನ್ನು ಕೊಟ್ಟು ಮಗುವನ್ನು ಸಾಕಿ ಬೆಳೆಸಿ, ವಿದ್ಯಾದಾನವನ್ನು ಮಾಡಿದ ಮಹಾತ್ಮರು ವಿಜಯದಾಸರು. ಈ ಮಗುವೇ ಮುಂದೆ 'ಮೋಹನದಾಸ' ರೆನಿಸಿಕೊಂಡರು. ವಿಜಯದಾಸರ ಔದಾರ್ಯ ಹಿರಿದಾದುದೆಂದು ಇದರಿಂದ ವಿದಿತವಾಗುತ್ತದೆ.

ವಿಜಯದಾಸರು ಸಕಲ ಚೇತನದಲ್ಲಿಯೂ ಶ್ರೀಹರಿಯ ಅಸ್ತಿತ್ವ ವನ್ನು ಗುರುತಿಸಿ ಪೂಜಿಸುತ್ತಿದ್ದ ಬಹು ದೊಡ್ಡ ಸಾಧಕರಾಗಿದ್ದರು. ಬಡತನ, ರೋಗ, ಸಾಂಸಾರಿಕ ಸಮಸ್ಯೆಯೇ ಮೊದಲಾದ ಹತ್ತಾರು ಬಗೆಯ ತೊಂದರೆಗಳಿದ್ದವರು ದಾಸರ ಬಳಿ ಬಂದು ಪರಿಹಾರಕ್ಕಾಗಿ ಪ್ರಾರ್ಥಿಸಿದಾಗ ಭಗವಂತನ ಆರಾಧನೆಗೈದು ಆಶೀರ್ವದಿಸುತ್ತಿದ್ದ ದೊಡ್ಡ ಮನಸ್ಸು ಅವರಲ್ಲಿತ್ತು. ಒಮ್ಮೆ ಚಾಗಿ ಎಂಬ ಹಳ್ಳಿಯ ಕೇಶವರಾಯ ಎಂಬುವವರಿಗೆ ಮರಣೋನ್ಮುಖ ಸ್ಥಿತಿ ಉಂಟಾಗಲು, ಅವರ ಕುಟುಂಬವರ್ಗದವರು ವಿಜಯದಾಸರ ಮೊರೆಹೊಕ್ಕರು. ಆಗ ವಿಜಯದಾಸರು ಹಿಂದೊಮ್ಮೆ ಸಾಯುತ್ತಿದ್ದ ಕತ್ತೆಯೊಂದಕ್ಕೆ ನೀರನ್ನು ಕುಡಿಸಿ ಬದುಕಿಸಿ ಸಂಪಾದಿಸಿದ ಪುಣ್ಯವನ್ನು ಧಾರೆ ಎರೆದು ಕೇಶವರಾಯನನ್ನು ಗುಣಮುಖರನ್ನಾಗಿ ಮಾಡಬಹುದೆಂದು ಶಿಷ್ಯರು ಅಭಿಪ್ರಾಯಪಟ್ಟರಂತೆ. ಆದರೆ ವಿಜಯದಾಸರು ತಾವು ಕಾಶೀಯಾತ್ರೆ ಮಾಡಿದ ನಿಮಿತ್ತ ದೊರೆತ ಪುಣ್ಯವನ್ನು ಧಾರೆ ಎರೆದು ಕೇಶವರಾಯನನ್ನು ಬದುಕಿಸಿ, **"ಕತ್ತೆಗೆ ನೀರನ್ನು ಕುಡಿಸಿ ಬದುಕಿಸಿದ ನಿಮಿತ್ತ ಉಂಟಾದ ಪುಣ್ಯವು ಕಾಶೀಯಾತ್ರೆಯ ಪುಣ್ಯಕ್ಕಿಂತ ಅಧಿಕ"** ಎಂದು ಹೇಳಿದರಂತೆ! ವಿಜಯದಾಸರ ಭೂತಾನುಕಂಪೆಗೆ ಇದಕ್ಕಿಂತ ಉತ್ತಮ ನಿದರ್ಶನ ಅನಗತ್ಯ.

ವಿಜಯದಾಸರು ನಲವತ್ತೊಂದು ವರ್ಷಗಳ ಕಾಲ ಹರಿದಾಸ ಜೀವನವನ್ನು ನಡೆಸಿದರು. ಈ ಅವಧಿಯಲ್ಲಿ ಬಯಸಿದ ಅರುವತ್ತು ಮಂದಿಗೆ ಅಂಕಿತೋಪದೇಶವನ್ನು ಮಾಡಿ ಹರಿದಾಸ ಸಾಹಿತ್ಯ ಪ್ರಸಾರ–ರಕ್ಷಣೆಗೈದು ಹರಿದಾಸ ಪರಂಪರೆ ಮುಂದುವರಿಯುವ ಹಾಗೆ ಮಾಡಿದರು. ವಿಜಯದಾಸರ ಪ್ರಭಾವದಿಂದ ಗೋಪಾಲ ದಾಸರು, ಜಗನ್ನಾಥದಾಸರು, ಪ್ರಾಣೇಶದಾಸರೇ ಮೊದಲಾದವರು ಹರಿದಾಸ ಸಾಹಿತ್ಯಕ್ಕೆ ಕಾಣಿಕೆ ನೀಡುವಂತಾಯಿತು. ವಿಜಯದಾಸರು ನಾಲ್ಕು ದಶಕಗಳ ಹರಿದಾಸ ಜೀವನದಲ್ಲಿ ರಚಿಸಿದ ಹಲವು ಸಹಸ್ರ ಕೀರ್ತನೆ/ಸುಳಾದಿಗಳಲ್ಲಿ ನಮಗೆ ಇಂದು ೧೨೦೦ ಕೀರ್ತನೆ/ಸುಳಾದಿ ಗಳು ಲಭ್ಯವಿದ್ದು, ಉಳಿದ ಯಾವ ಹರಿದಾಸರ ರಚನೆಗಳೂ ಈ ಸಂಖ್ಯೆಯಲ್ಲಿ ನಮಗೆ ದೊರೆತಿಲ್ಲ. ವಿಜಯದಾಸರು ರಚಿಸಿರುವ ಸುಮಾರು ೬೦೦ ಸುಳಾದಿಗಳು ದೊರೆತಿದ್ದು, ಹರಿದಾಸ ಪ್ರಪಂಚದಲ್ಲಿ ವಿಜಯದಾಸರು 'ಸುಳಾದಿ ದಾಸರು' ಎಂದೇ ಖ್ಯಾತರಾಗಿದ್ದಾರೆ. ಈ ಸುಳಾದಿಗಳಲ್ಲಿ ಸೃಷ್ಟಿ, ಸ್ಥಿತಿ, ಲಯ, ಜೀವರ ಸಾಧನಾವಿಧಾನ, ಭಕ್ತಿಯ ಬೆಳವಣಿಗೆಯ ಕ್ರಮ, ಧ್ಯಾನ ವಿಧಾನ, ಮನೋನಿಯಂತ್ರಣ, ಮೋಕ್ಷದ ಸ್ವರೂಪ, ಬಿಂಬಪೂಜಾ ವಿಧಾನ, ಅನುಸಂಧಾನಬೋಧೆ, ಹರಿಸರ್ವೋತ್ತಮತ್ವ, ಜೀವರ ಅಸ್ವಾತಂತ್ರ್ಯ, ಅರಿಷಡ್ವರ್ಗಗಳನ್ನು ನಿಯಂತ್ರಿಸುವ ಬಗೆ, ಪ್ರತಿಮಾ ಪೂಜಾ ವಿಧಾನ, ಸರ್ವಸಮದರ್ಶಿತ್ವ, ಪ್ರಮೇಯ ರಹಸ್ಯ, ಧರ್ಮಸೂಕ್ಷ್ಮ, ಮಾನವನ ಕರ್ತವ್ಯ, ನಿಷೇಧ ಕಾರ್ಯಗಳು, ಚಕ್ರಾಬ್ಜ ಮಂಡಲ, ಪಂಚಭೂತಗಳ ಸ್ವರೂಪ, ಬಿಂಬಾಪರೋಕ್ಷದ ಸ್ವರೂಪ, ತೀರ್ಥಯಾತ್ರಾ ಸ್ಥಳಗಳ ಇತಿಹಾಸ ಹಾಗೂ ಪುರಾಣಕಥೆಗಳ ಪರಿಚಯ, ಬದುಕಿನಲ್ಲಿ ಕಷ್ಟಗಳನ್ನು ಎದುರಿಸುವ ಬಗೆ, ಭಕ್ತಿಯ ಪ್ರಯೋಜನ ಇತ್ಯಾದಿ ನೂರಾರು ಅಂಶಗಳನ್ನು ವಿವರಿಸಿದ್ದಾರೆ. ದಾಸರ ಸುಳಾದಿಗಳಲ್ಲಿರುವ ವಿಷಯಗಳಿಗೆ ಆಕರವನ್ನು ಗುರುತಿಸ ಬೇಕಾದರೆ ಪುರಾಣ ಹಾಗೂ ವೇದಾಂತದಲ್ಲಿ ಆಳವಾದ ಜ್ಞಾನ ಅಗತ್ಯವಾಗುತ್ತದೆ. ಆದ್ದರಿಂದ ವಿಜಯದಾಸರ ಸಾಹಿತ್ಯವನ್ನು ಅವರ ಕಾಲದಲ್ಲಿಯೇ ಪರಾಮರ್ಶೆ ಮಾಡಿದ ಪ್ರಾಜ್ಞರು 'ಸುಧಾ ಓದಿ ಪದಾ ಹೇಳು' ಎಂಬ ಗಾದೆಯ ಮಾತನ್ನಾಡಿದರು ('ನ್ಯಾಯಸುಧಾ' ಎನ್ನುವುದು ಮಧ್ವ ಸಿದ್ಧಾಂತದ ಶಾಸ್ತ್ರೀಯ ಗ್ರಂಥಗಳಲ್ಲಿ ಒಂದು). ಸಾಮಾನ್ಯ ಜನರು ವಿಜಯದಾಸರನ್ನು ಎರಡನೆಯ ಪುರಂದರದಾಸರು ಎಂದರು. ವಿಜಯದಾಸರ ಜೀವನ ಮತ್ತು ಸಾಹಿತ್ಯಗಳಿಗೆ ಮಾರುಹೋದ ಅಂದಿನ ಆದವಾನಿ ಪ್ರಾಂತ್ಯದ ಮಂತ್ರಿ ದಿವಾನ್ ತಿಮ್ಮಣ್ಣ, ಇವರಿಂದ ಹರಿದಾಸ ದೀಕ್ಷೆಯನ್ನು ಸ್ವೀಕರಿಸಿ ಶಿಷ್ಯರಾಗಿ 'ವೇಣುಗೋಪಾಲ ವಿಠಲ'ನ ಆರಾಧಕರಾದರು. ತಿಮ್ಮಣ್ಣನ ಮಗ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ನಿಮಿತ್ತ ಉಂಟಾದ ದುಃಖವನ್ನು ತಾಳಿಕೊಳ್ಳುವ ಶಕ್ತಿಯನ್ನು ತಿಮ್ಮಣ್ಣ ಹಾಗೂ ಅವನ ಕುಟುಂಬವರ್ಗ ಹರಿದಾಸ ಸಾಹಿತ್ಯದಿಂದ ಪಡೆದುಕೊಂಡರಂತೆ!

ಪೂಜೆಯನ್ನು ಭಗವಂತನ ಕೃಪಾಪ್ರಸಾದಕ್ಕಾಗಿ ಮಾಡಬೇಕೇ ವಿನಾ ಹತ್ತು ಹಲವು ಬೇಡಿಕೆಗಳ ಈಡೇರಿಕೆಗಳಿಗೆ ಅಲ್ಲ; ಪ್ರತಿಫಲಾಪೇಕ್ಷೆಯಿಲ್ಲದ ಪೂಜೆಯೇ ಶ್ರೇಷ್ಠವಾದುದು; ಇದರಿಂದ ದೈವಾನುಗ್ರಹ ಕ್ಷಿಪ್ರವಾಗಿ ಉಂಟಾಗುವುದಲ್ಲದೆ ಎಲ್ಲ ಬಗೆಯ

ಕಷ್ಟಗಳನ್ನೂ ತಾಳಿಕೊಳ್ಳುವ, ಪರಿಹರಿಸಿಕೊಳ್ಳುವ ಶಕ್ತಿ ಬರುತ್ತದೆ; **"ತಾಪತ್ರಯಂಗಳ ತಾಳುವಂತೆ ಪ್ರೇರಿಸಿ ಆಪತ್ತು ಕಾಲಕ್ಕೆ ಧೈರ್ಯವೀಯೊ"** ಎಂಬುದು ಭಕ್ತನ ಬಿನ್ನಹವಾಗಬೇಕೆಂಬುದು ವಿಜಯದಾಸರ ಉಪದೇಶವಾಗಿದೆ.

**'ಅಲ್ಪ ಸಂತೋಷನಾಗು ಅದು ಹಾಲು ಸಕ್ಕರೆ ತುಪ್ಪ'** ಎಂದಿರುವ ವಿಜಯದಾಸರು

**'ಸಪ್ಪೆ ಮೆಲುವಾಗ ಉಪ್ಪಿನ ಯೋಚನೆ । ಉಪ್ಪು ಮೆಲುವಾಗ ಸೊಪ್ಪಿನ ಯೋಚನೆ । ಸೊಪ್ಪು ದೊರಕಿದಾಗ ತುಪ್ಪದ ಯೋಚನೆ। ತುಪ್ಪ ದೊರಕಿದಾಗ ಕುಪ್ಪೆಯ ಯೋಚನೆ । ಕುಪ್ಪೆ ದೊರಕಿದಾಗ ಕೊಪ್ಪರಿಗೆ ಯೋಚನೆ । ಕೊಪ್ಪರಿಗೆ ಉಂಟಾಗೆ ಸಪ್ತದ್ವೀಪದ ಚಿಂತೆ'**

(ಕುಪ್ಪೆ = ಗುಡ್ಡೆ)

ಎಂದು ವಿವರಿಸುತ್ತಾ, ಆಸೆಯ ಸರಪಣಿ ಹೇಗೆ ಬೆಳೆಯುವುದೆಂಬುದನ್ನು ತಿಳಿಸಿ ತೃಪ್ತಿಯ ಜೀವನ ಮಾಡುವ ಕಲೆಯನ್ನು ರೂಢಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ.

**'ಮನಸ್ಸು ತರಗೆಲೆಯಂತೆ ಹಗುರ, ದುರ್ವಾಸನೆ (ಆಸೆ) ಎಂಬ ಅನಿಲ ಬೀಸಲು ಕ್ಷಣವೊಂದರೊಳಗೆ ಕೋಟಿಕೋಟಿ ಯೋಜನ ಹಾರಿ ಸುತ್ತುತಲಿದೆ । ಘನಮಹಿಮ ನಿನ್ನಂಘ್ರಿ ವನಜಯುಗಳ ಊರಿ ಮನವೆಂಬ ತರಗೆಲೆಯನು ಹಾರದಂತೆ ದಯವನು ಮಾಡು ನಿನಗೆ ವಂದನೆಗೈವೆ ಹರುಷದಲಿ'**

ಎಂಬಂತಹ ಭಕ್ತಿಯುಕ್ತ ವಾಕ್ಯಗಳು ವಿಜಯದಾಸರ ಕೃತಿಗಳಲ್ಲಿ ತುಂಬಿ ತುಳುಕುತ್ತಿವೆ. ಸುಖ–ದುಃಖ, ಬಡತನ–ಸಿರಿವಂತಿಕೆ, ನಿಂದೆ–ಸ್ತುತಿ, ಲಾಭ–ನಷ್ಟಗಳೆಲ್ಲವೂ ಶ್ರೀಹರಿಯ ಇಚ್ಛೆಯಂತೆ ಅನುಭವಕ್ಕೆ ಬರುವುದೆಂಬ ನಿಲುವನ್ನು ಹೊಂದಿದ್ದ ವಿಜಯದಾಸರು,

**'ಆನಂದ ಆನಂದ ಆನಂದ ಮತ್ತೆ ಪರಮಾನಂದ । ಆನಂದನ ಕಂದನೊಲಿಯೆ ಏನಂದದ್ದೆ ವೇದವೃಂದ'**

ಎಂದು ನುಡಿದು ಭಗವಂತನು ಸರ್ವಶಬ್ದ ವಾಚ್ಯನೆಂಬ ತತ್ವ ಬೋಧ ಮಾಡಿದ್ದಾರೆ. **'ಸದಾ ಎನ್ನ ಹೃದಯದಲ್ಲಿ ವಾಸ ಮಾಡೊ ಶ್ರೀಹರೀ'** ಎಂದು ಹರಿಯನ್ನು ಪ್ರಾರ್ಥಿಸಿ, **'ತೈಲಧಾರೆಯಂತೆ ಮನಸು ಕೊಡು ಶಂಭೋ'** ಎಂದು ಮಹಾದೇವ ಶಿವನಲ್ಲಿ ಬೇಡಿದ್ದಾರೆ. ಮನುಷ್ಯನ ಆರ್ಥಿಕ, ಭೋಗ–ಭಾಗ್ಯಗಳ ಸ್ಥಿತಿ ಹೇಗೇ ಇರಲಿ, ಅತ್ಯಂತ ತೃಪ್ತಿ–ಶಾಂತಿ–ನಿರಹಂಕಾರ ಮನಸ್ಸನ್ನು ರೂಢಿಸಿಕೊಳ್ಳಲು ಅಗತ್ಯವಾದ ವಿಚಾರಧಾರೆ ವಿಜಯದಾಸರ ಕೃತಿಗಳಲ್ಲಿ ತುಂಬಿರುವುದರಿಂದ ಅವರ ಕೃತಿಗಳು ಇಂದಿಗೂ ಪ್ರಸ್ತುತವೆನಿಸುತ್ತದೆ. ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆಗಳನ್ನು ಸಂತೋಷವಾಗಿ ಸಲ್ಲಿಸಿ, **'ಕೊಡುವ ಕಪ್ಪಗಳು ಹರಿಗೆ ಕೊಟ್ಟೆವು ಎನ್ನಿ'** ಎಂಬ ಅನುಸಂಧಾನ ಬೋಧೆಯಿಂದ, ವಿಜಯದಾಸರ ದೇಶಭಕ್ತಿ ಅನನ್ಯವಾದುದೆಂದು ಗ್ರಹಿಸಬಹುದಾಗಿದೆ.

ಹೀಗೆ ವಿಜಯದಾಸರ ಜೀವನ ಮತ್ತು ಕೃತಿಗಳ ಸಮೀಕ್ಷೆಯಿಂದ ಜ್ಞಾನ, ಭಕ್ತಿ, ವೈರಾಗ್ಯ, ಮಾನವೀಯತೆ, ದಯೆ, ಔದಾರ್ಯ, ಪರೋಪಕಾರ, ತೃಪ್ತಿ, ಶಾಂತಿ, ಕ್ಷಮೆ ಮೊದಲಾದ ಗುಣಗಳನ್ನು ರೂಢಿಸಿಕೊಳ್ಳುವ ಮನಸ್ಸು ನಮಗುಂಟಾಗುತ್ತದೆ.

## ಸ್ನೇಹಪ್ರಭ

### ಎಲ್ಲರನ್ನೂ ಸಮನಾಗಿ ನೋಡುವುದು, ಪ್ರೀತಿಸುವುದು ಸಾಧ್ಯವೇ? ಅದು ಹೇಗೆ?

ಎಲ್ಲರನ್ನೂ ಸಮವಾಗಿ ಪ್ರೀತಿಸಬೇಕೆಂದರೆ, ಯಾರಿಂದಲೂ ಏನನ್ನೂ ಅಪೇಕ್ಷಿಸಬಾರದು ಎಂದು ಶ್ರೀಮಾತೆ ಶಾರದಾದೇವಿಯವರು ಹೇಳುತ್ತಾರೆ. ಯಾವುದನ್ನಾದರೂ ಅಪೇಕ್ಷಿಸಿದರೆ ಅಪೇಕ್ಷಿತ ವಸ್ತುವನ್ನು ಪ್ರೀತಿಸಿದಂತಾಗುತ್ತದೆಯೇ ಹೊರತು ವ್ಯಕ್ತಿಯನ್ನು ಪ್ರೀತಿಸಿದಂತಾಗುವುದಿಲ್ಲ. ವ್ಯಕ್ತಿಯನ್ನು ಪ್ರೀತಿಸಬೇಕಾದರೆ ವಿಷಯವಸ್ತುಗಳ ಅಪೇಕ್ಷೆ ಕಡಮೆಯಾಗಬೇಕು. ನಾವೆಲ್ಲರೂ ಇತರರ ಪ್ರೀತಿಯನ್ನು ಬಯಸುತ್ತೇವೆ. ಹಾಗೆಯೇ ಇತರರೂ ನಮ್ಮ ಪ್ರೀತಿಯನ್ನು ಬಯಸುತ್ತಾರೆ. ನಾವು ಇತರರಿಂದ ಏನನ್ನು ಬಯಸುತ್ತೇವೆಯೋ ಅದನ್ನು ಇತರರಿಗೂ ನೀಡುವಂತಾಗಬೇಕು. ತನ್ನಂತೆಯೇ ಪರರು – ಇದು ಅತ್ಯಂತ ಸ್ವಾಭಾವಿಕ ಸತ್ಯ. "ಇತರರಿಗೆ ಪ್ರೀತಿ ತೋರಿಸುವುದು ನನ್ನ ಬೆಳವಣಿಗೆ ಮತ್ತು ವಿಕಾಸಕ್ಕೆ ಆವಶ್ಯಕ. ಪ್ರೀತಿಯ ಭಾವವೇ ನನಗೆ ಸಂತೃಪ್ತಿಯನ್ನು ನೀಡಬೇಕು" – ಈ ಭಾವ ನಮ್ಮಲ್ಲಿರಬೇಕು. ಅನೇಕ ಕೌಟುಂಬಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಮತ್ತು ವೈಯಕ್ತಿಕ ಗೊಂದಲಗಳು, ಮಾನಸಿಕ ಒತ್ತಡಗಳು, ಸಂಕೀರ್ಣತೆಗಳು – ಇವುಗಳಿಂದಾಗಿ ವ್ಯಕ್ತಿಯಲ್ಲಿ ಪ್ರೀತಿಯ ಭಾವವು ಅದುಮಿಡಲ್ಪಡುತ್ತದೆ. ಇತರರ ಪ್ರೀತಿಯನ್ನು ಪಡೆಯದ ಮಕ್ಕಳು ಪ್ರೀತಿಸುವ ಸಾಮರ್ಥ್ಯವನ್ನು ಕಳೆದುಕೊಂಡು, ತಮ್ಮನ್ನು ತಾವು ದ್ವೇಷಿಸಿಕೊಳ್ಳುತ್ತ ಇಡೀ ಸಮಾಜವನ್ನೂ ದ್ವೇಷಿಸುವ ಸ್ಥಿತಿಯನ್ನು ಮುಟ್ಟುತ್ತಾರೆ. ನಮ್ಮ ಪ್ರೀತಿಯ ಮೂಲಕ ಇಂಥವರ ಹೃದಯವನ್ನು ಸ್ಪರ್ಶಿಸಿದಾಗ ಅವರಲ್ಲಿ ಪ್ರೀತಿಯ ಭಾವ ಕೆರಳುತ್ತದೆ. ನಾವು ಇತರರನ್ನು ನಿರಪೇಕ್ಷದೃಷ್ಟಿಯಿಂದ ಪ್ರೀತಿಸಬೇಕಾದರೆ ನಮ್ಮ ಅಹಂಕೇಂದ್ರಿತ ವ್ಯಕ್ತಿತ್ವದಿಂದ, ನಮ್ಮ ಜೈವಿಕ ಅಸ್ತಿತ್ವದ ಪರಿಧಿಯಿಂದ ನಾವು ಹೊರಬರಬೇಕು.

ಎಲ್ಲರನ್ನೂ ಸಮಾನವಾಗಿ ಪ್ರೀತಿಸಬೇಕೆಂಬುದು ನಿಜವಾದರೂ ಪ್ರೀತಿಯನ್ನು ತೋರಿಸುವ ವಿಧಾನ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಕೆಲವರ ವಿಷಯದಲ್ಲಿ ಅತ್ಯಂತ ನಿಕಟವಾಗಿ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದು, ಕೆಲವರ ವಿಷಯದಲ್ಲಿ ಪರೋಕ್ಷವಾಗಿ (ಉದಾಹರಣೆಗೆ ಪ್ರಾರ್ಥನೆಯ ಮೂಲಕ) ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದು. ಕೆಲವರ ವಿಷಯದಲ್ಲಿ ದಂಡನೆಯ ಮೂಲಕವೂ ಪ್ರೀತಿಯನ್ನು ವ್ಯಕ್ತಪಡಿಸಬಹುದು. ಇನ್ನು ಕೆಲವರ ವಿಷಯದಲ್ಲಿ ಔದಾಸೀನ್ಯವೇ ಪ್ರೀತಿಯ ಅಭಿವ್ಯಕ್ತಿಯಾಗಬಹುದು. ಕೆಲವರು ತಾವು ಒಳ್ಳೆಯವರೆನಿಸಿಕೊಳ್ಳಬೇಕೆಂಬ ಆಸೆಯಿಂದ ಅಪಾತ್ರರಿಗೆ ಅನುಚಿತ ರೀತಿಯಲ್ಲಿ ಪ್ರೀತಿಯನ್ನು ತೋರಿಸಿ ತಾವು ಇರುವ ಸಂಸ್ಥೆಗೂ ಸಮಾಜಕ್ಕೂ ಹಾನಿಯನ್ನುಂಟುಮಾಡುತ್ತಾರೆ. ಹಾಗೆ ಮಾಡಬಾರದು.

(ಬರಹ: ಸ್ವಾಮಿ ನಿತ್ಯಸ್ಥಾನಂದ)